**ಓಎಸ್. ನಂ.*08/2020***

**ಪಿಡಬ್ಲೂ*: 01***

**ಇಂದು ದಿನಾಂಕ*:23.08.2024* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಸಿ.ಕೆ.ಎಂ.ವಕೀಲರಿಂದಃ**

ಮಂಗಳೂರು ಹೆಂಚಿನ ಮನೆ ಮತ್ತು ಒಪ್ಪಾರಿನಲ್ಲಿ ಯಾರು ವಾಸವಿದ್ದೇವೆ ಎಂದರೆ ಎಲ್ಲರೂ ವಾಸವಿದ್ದೇವೆ. ಸದರಿ ಮನೆ ಉಡಾರು ಕಟ್ಟಿನ ಮನೆ ಎಂದರೆ ಸರಿ. ಆ ಮನೆಯ ಉತ್ತರ ದಿಕ್ಕಿನ ಮೂರನೇ ಒಂದು ಭಾಗದ ಮನೆಯಲ್ಲಿ ನಾನು ಮತ್ತು ನನ್ನ ತಾಯಿ ವಾಸವಿದ್ದೇವೆ ಎಂದರೆ ಸರಿ. ಉಡಾರು ಕಟ್ಟು ಮನೆಯ ಮಧ್ಯದಲ್ಲಿ ಇರುವ ಮೂರನೇ ಒಂದು ಭಾಗದಲ್ಲಿ ನನ್ನ ತಂದೆಯ 2 ನೇ ಹೆಂಡತಿ ಶಿವಮ್ಮ ಮತ್ತು ಅವರ ಮಗ ಮೃತ ಗೊವಿಂದನ ಹೆಂಡತಿ ಮತ್ತು ಮಕ್ಕಳು ವಾಸವಿದ್ದಾರೆ ಎಂದರೆ ಸುಳ್ಳು. ದಕ್ಷಿಣದ ಮೂರನೇ ಒಂದು ಭಾಗದಲ್ಲಿ ಇರುವ ಮನೆಯಲ್ಲಿ ನಮ್ಮ ತಂದೆ ಮತ್ತು ಅವರ ತಾಯಿ ವಾಸವಿದ್ದರು ಎಂದರೆ ಸುಳ್ಳು. ಸರ್ವೆ ನಂ.37/7 ರ 4 ಎಕರೆ ಜಮೀನು ನಾನು ಮತ್ತು ನನ್ನ ತಾಯಿ ವ್ಯವಸಾಯ ಮಾಡುತ್ತಿದ್ದೇವೆ ಎಂದರೆ ಸದರಿ ಜಮೀನು ಹಾಗೂ ಸರ್ವೆ ನಂ.35/2 ಈ ಎರಡು ಜಮೀನುಗಳಲ್ಲಿ ಸ್ವಲ್ಪ ಸ್ವಲ್ಪ ವ್ಯವಸಾಯ ಮಾಡುತ್ತಿದ್ದೇವೆ. ಸರ್ವೆ ನಂ.37/2 ರಲ್ಲಿ ನಾನು ಮತ್ತು ನನ್ನ ತಾಯಿ ಹೆಚ್ಚು ಕಡಿಮೆ 2 ಎಕರೆ ವ್ಯವಸಾಯ ಮಾಡುತ್ತಿದ್ದೇವೆ. ಉಳಿದ 2 ಎಕರೆಯಲ್ಲಿ ನಮ್ಮ ತಂದೆ ವ್ಯವಸಾಯ ಮಾಡುತ್ತಿದ್ದೇವೆ. ನಾನು ಉಳುಮೆ ಮಾಡುತ್ತಿರುವ 2 ಎಕರೆ ಜಮೀನ ಉತ್ತರಕ್ಕೆ ನನ್ನ ತಂದೆ ಉಳುಮೆ ಮಾಡುತ್ತಿರುವ ಜಮೀನು ಬರುತ್ತದೆ. ಸರ್ವೆ ನಂ.35/2 ರಲ್ಲಿ 9 ಎಕರೆ 14 ಗುಂಟೆ ಇದೆ ಎಂದರೆ ಸರಿ. ಅದರ ಪೈಕಿ 4 ಎಕರೆ ಜಮೀನನ್ನು ನಮ್ಮ ತಂದೆಯ 2 ನೇ ಹೆಂಡತಿ ಶಿವಮ್ಮ ಹಾಗೂ ಅವರ ಮಗ ಮೃತ ಗೋವಿಂದನ ಹೆಂಡತಿ ಮತ್ತು ಮಕ್ಕಳು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸುಳ್ಳು. ಸರ್ವೆ ನಂ.35/2 ರಲ್ಲಿ ಅಂದಾಜು 2 ಎಕರೆ ಉಳುಮೆ ಮಾಡುತ್ತಿದ್ದೇನೆ. ನಾನು ಉಳುಮೆ ಮಾಡುತ್ತಿರುವ ಜಮೀನಿನ ಉತ್ತರ ದಿಕ್ಕಿಗೆ ಶಿವಮ್ಮ ಮತ್ತು ಅವರ ಸೊಸೆ ಉಳುಮೆ ಮಾಡುತ್ತಿರುವ ಜಮೀನು ಇದೆ. 9 ಎಕರೆ 14 ಗುಂಟೆ ಪೈಕಿ 4 ಎಕರೆ 27 ಗುಂಟೆ ಉಳುಮೆ ಮಾಡುತ್ತಿದ್ದರು ಎಂದರೆ ಸರಿ. 4 ಎಕರೆ 27 ಗುಂಟೆ ಜಮೀನನ್ನು ನಮ್ಮ ತಂದೆ ನನ್ನ ಸಹೋದರಿ ಜಯಲಕ್ಷ್ಮಿಯವರಿಗೆ ದಾನ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಆ ಜಯಲಕ್ಷ್ಮಿಯೇ ಈ ಕೇಸಿನ 2 ನೇ ಪ್ರತಿವಾದಿ ಎಂದರೆ ಸರಿ. ದಿನಾಂಕಃ 05-09-2018 ರಲ್ಲಿ ದಾನ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ದಾನ ಪತ್ರದ ಮೂಲಕ 2 ನೇ ಪ್ರತಿವಾದಿ ಸ್ವಾಧೀನ ಪಡೆದು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸುಳ್ಳು. ಸರ್ವೆ ನಂ.32/2 ರ 4 ಎಕರೆ 27 ಗುಂಟೆ ಜಮೀನಿನ ಖಾತೆ ಯಾರ ಹೆಸರಿನಲ್ಲಿ ಇದೆ ಎಂದರೆ ನಾನು ನೋಡಿಲ್ಲ. ದಾವಾ ಸಲ್ಲಿಸುವ ಕಾಲಕ್ಕೆ ದಾವಾ ಆಸ್ತಿಗಳ ರೆವೆನ್ಯೂ ದಾಖಲೆಗಳನ್ನು ನಮ್ಮ ವಕೀಲರಿಗೆ ಕೊಟ್ಟಿದ್ದೇನೆ. ಸರ್ವೆ ನಂ.35/3 ರ ಆರ್.ಟಿ.ಸಿ. 2 ನೇ ಪ್ರತಿವಾದಿ ಹೆಸರಿನಲ್ಲಿ ಇದೆ ಎಂದರೆ ಸರಿ. ಸರ್ವೆ ನಂ.35/2 ರ ಜಮೀನಿಗೆ ದಾನ ಪತ್ರ ಆದ ನಂತರ ಸರ್ವೆ ಸೆಟಲ್‌ಮೆಂಟ್ ಮೂಲಕ ಸರ್ವೆ ನಂ.35/3 ಆಗಿದೆ ಎಂದರೆ ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**